# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 22/2021**

**ದೋ.ಸಾ. : 18 ಪ್ರಾ.ಸಾ. : 11**

| | | |
|---|---|---|
| ಸಾಕ್ಷಿಯ ಹೆಸರು | : | ಕಲಿಮುದ್ದಿನ್ ಅಬ್ದುಲ್ ರೆಹಮಾನ ಶೇಖ |
| ತಂದೆಯ ಹೆಸರು | : | ಅಬ್ದುಲ್ ರೆಹಮಾನ ಶೇಖ |
| ವಯಸ್ಸು | : | 52 ವರ್ಷ |
| ಕೆಲಸ | : | ಚಾಲಕ |
| ವಾಸ | : | ಸುಲ್ತಾನಕೇರಿ, ಚಂದಾವರ, ತಾಃ ಹೊನ್ನಾವರ |

**ದಿನಾಂಕಃ 19-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

1. ಈಗ ನ್ಯಾಯಾಲಯದ ವಿ.ಸಿ.ಯಲ್ಲಿ ಕಾಣುತ್ತಿರುವ ಆರೋಪಿ ನನಗೆ ಗೊತ್ತು, ಆತ ಮೊದಲಿಗೆ ನನ್ನ ಹೆಂಡತಿಯ ತಂಗಿಯನ್ನು ಮದುವೆ ಮಾಡಿಕೊಂಡಿದ್ದ, ಆಕೆಗೂ ಸಹ ಕಿರುಕುಳ ನೀಡಿ, ಕೊಲೆ ಪ್ರಯತ್ನ ಮಾಡಿರುತ್ತಾನೆ. ಆದ್ದರಿಂದ, ಆತನ ಹೆಂಡತಿ ಆರೋಪಿಯಿಂದ ವಿಚ್ಛೇದನ ಪಡೆದುಕೊಂಡಿರುತ್ತಾಳೆ. ಆನಂತರ ಆರೋಪಿಯು ಮತ್ತೊಬ್ಬರನ್ನು ಮದುವೆಯಾಗಿರುತ್ತಾನೆ. ಆರೋಪಿಯು ಊರಿನ ಹೆಣ್ಣುಮಕ್ಕಳೊಂದಿಗೆ ಅಸಭ್ಯವಾಗಿ ವರ್ತಿಸಿ, ತೊಂದರೆ ಕೊಡುತ್ತಾ ಬಂದಿರುತ್ತಾನೆ, ಈ ವಿಚಾರವಾಗಿ ಸದರಿ ಪ್ರಕರಣ ದಾಖಲಾಗುವ ಪೂರ್ವದಲ್ಲಿ ಚಾಸಾ-14 ಹೀನಾ ಕೌಸರ್ ಸಿಕಂದರ್ ರವರೂ ಸಹ ಆರೋಪಿಯ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು. ಮೃತ ಅಬುತಾಲೀಬ್ ನನಗೆ ಗೊತ್ತು, ಆತ ಜನತಾ ಕಾಲೋನಿಯಲ್ಲಿ ತನ್ನ ಹೆಂಡತಿಯಾದ ಚಾಸಾ-1 ಮತ್ತು ಮಕ್ಕಳಾದ ಚಾಸಾ-19 ಸೇರಿ ಮೂವರು ಮಕ್ಕಳೊಂದಿಗೆ ವಾಸವಾಗಿದ್ದರು. ಅಬುತಾಲೀಬ್ ರವರು ಲಗೇಜು ರಿಕ್ಷಾವನ್ನು ಬಾಡಿಗೆಗೆ ಓಡಿಸುತ್ತಿದ್ದರು.

2. ದಿ.03-05-2021 ರಂದು ಮಧ್ಯಾಹ್ನ 1.00 ಗಂಟೆಯ ಸಮಯದಲ್ಲಿ ನಾನು ಆರೋಪಿಯ ಮನೆಯ ಬಳಿ ಇರುವ ಈದ್ಗಾ ಮೈದಾನದಲ್ಲಿದ್ದಾಗ, ಚಾಸಾ-14 ಹಾಗೂ ಆರೋಪಿಯ ಮನೆಯ ಮುಂದಿನ ಮಣ್ಣಿನ ರಸ್ತೆಯಲ್ಲಿ ಆರೋಪಿ ಹಾಗೂ ಅಬುತಾಲೀಬ್ ರವರ ನಡುವೆ ಜಗಳವಾಗುತ್ತಿತ್ತು. ಆ ಸಮಯದಲ್ಲಿ ಚಾಸಾ-1, ಚಾಸಾ-19, ಚಾಸಾ-11,

ಚಾಸಾ-12, ಚಾಸಾ-10 ಮತ್ತು 15 ಹಾಗೂ ಇತರರೂ ಸೇರಿದ್ದರು. ಚಾಸಾ-10 ರವರು ಚಾಸಾ-14 ಹೀನಾ ಕೌಸರ್ ಮನೆಯ ಕಂಪೌಂಡಿನಲ್ಲಿ ನಿಂತು ಜಗಳವನ್ನು ತಮ್ಮ ಮೊಬೈಲಿನಿಂದ ವೀಡಿಯೋ ಮಾಡುತ್ತಿದ್ದರು.

3. ಅಲ್ಲಿ ಅಬುತಾಲಿಬ್ ರವರು ಆರೋಪಿಗೆ ಉದ್ದೇಶಿಸಿ, "ಕೇರಿಯ ಹೆಂಗಸರಿಗೆ ಯಾಕೆ ತೊಂದರೆ ಕೊಡುತ್ತೀಯಾ ಹಾಗೂ ಅಜರುದ್ದೀನ್ ರವರ ಹೆಂಡತಿಯಾದ ಅಂಜುಂ ರವರಿಗೆ ಯಾಕೆ ಲುಂಗಿ ಎತ್ತಿ ತೋರಿಸಿ, ಅಸಭ್ಯವಾಗಿ ವರ್ತಿಸಿದೆ" ಎಂದು ಕೇಳಿದಾಗ, ಆರೋಪಿಯು ಅಬುತಾಲಿಬ್ ಗೆ ಉದ್ದೇಶಿಸಿ, "ನನ್ನನ್ನು ಕೇಳಲು ನೀನು ಯಾರು?, ರಾಂಡಕೇ ಬೇಟೆ" ಎಂದು ಬೈದಿದ್ದು, ಆಗ ಅಬುತಾಲಿಬ್ ರವರು ಆರೋಪಿಗೆ, "ನೀನು ಹೀಗೆ ಮಾಡಿದರೆ, ನಿನ್ನ ಮೇಲೆ ಪೊಲೀಸರಿಗೆ ದೂರು ನೀಡಿ, ಒಳಗೆ ಹಾಕಿಸುತ್ತೇನೆ" ಎಂದು ಹೇಳಿದಾಗ, ಆರೋಪಿಯು ತನ್ನ ಮನೆಗೆ ಹೋಗಿ ಒಂದು ಚಾಕುವನ್ನು ಕೈಯಲ್ಲಿ ಹಿಡಿದುಕೊಂಡು ಬಂದಿದ್ದು, ಆ ಸಮಯದಲ್ಲಿ ಚಾಸಾ-11 ಮತ್ತು 12 ರವರು ಆರೋಪಿಗೆ ಜಗಳ ಮಾಡದಂತೆ ಸಮಾಧಾನ ಮಾಡುತ್ತಿದ್ದರು. ಆದರೂ ಸಹ ಆರೋಪಿಯು ಅಬುತಾಲಿಬ್ ರವರನ್ನುದ್ದೇಶಿಸಿ, "ಬೇರೆಯವರ ಹೆಂಡತಿಯ ವಿಷಯವಾಗಿ ನನ್ನ ಸುದ್ದಿಗೆ ಬಂದರೆ, ನಿನ್ನನ್ನು ಕೊಲೆ ಮಾಡಿಬಿಡುತ್ತೇನೆ" ಎಂದು ಹೇಳಿ, ತನ್ನ ಕೈಯಲ್ಲಿದ್ದ ಚಾಕುವಿನಿಂದ ತಿವಿಯಲು ಬಂದಿದ್ದು, ಆಗ ಅಬುತಾಲಿಬ್ ರವರು ಅಲ್ಲಿಯೇ ಬಿದ್ದಿದ್ದ ಅಡಿಕೆ ಮರದ ದಬ್ಬೆಯನ್ನು ತೆಗೆದುಕೊಂಡು ಆರೋಪಿಯ ಕೈಯಲ್ಲಿದ್ದ ಚಾಕುವನ್ನು ಬೀಳಿಸಲು ಆತನ ಕೈಗೆ ಹೊಡೆದಾಗ, ಆರೋಪಿಯು "ನಿನ್ನನ್ನು ಕೊಲೆ ಮಾಡುತ್ತೇನೆ" ಎಂದು ಹೇಳಿ, ತನ್ನ ಕೈಯಲ್ಲಿದ್ದ ಚಾಕುವಿನಿಂದ ಅಬುತಾಲಿಬ್ ರವರ ಎದೆಗೆ ಚುಚ್ಚಿದ್ದು, ಅವರ ಎದೆಯಿಂದ ರಕ್ತ ಬಂದಿರುತ್ತದೆ ಹಾಗೂ ಅಬುತಾಲಿಬ್ ರವರು ಕೆಳಗೆ ಬಿದ್ದಿರುತ್ತಾರೆ, ನಂತರ ಆರೋಪಿಯು ತನ್ನ ಕೈಯಲ್ಲಿ ಚಾಕುವನ್ನು ಹಿಡಿದುಕೊಂಡು ಅಲ್ಲಿಂದ ಹೋಗಿರುತ್ತಾನೆ. ಆಗ ಸಮಯ ಮಧ್ಯಾಹ್ನ 1.15 ಗಂಟೆಯಾಗಿತ್ತು. ಸ್ಥಳದಲ್ಲಿದ್ದ ನಾವುಗಳೆಲ್ಲಾ ಸೇರಿ, ಅಬುತಾಲಿಬ್ ರವರಿಗೆ ಉಪಚರಿಸಿದ್ದು, ನಂತರ ಅವರ ಹೆಂಡತಿಯಾದ ಚಾಸಾ-1, ಅವರ ಮಗ ಚಾಸಾ-19 ಮತ್ತು ಚಾಸಾ-13 ಹೀನಾ ಕೌಸರ್ ರವರು ಸೇರಿ, ಚಾಸಾ-16 ರವರ ಆಟೋದಲ್ಲಿ ಅಬುತಾಲಿಬ್ ರವರನ್ನು ಕುಮಟಾದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಆನಂತರ ನಾವೂ ಸಹ ಕುಮಟಾದ ಸರಕಾರಿ ಆಸ್ಪತ್ರೆಗೆ ಹೋಗಿದ್ದು, ಅಲ್ಲಿ 1.50 ಸುಮಾರಿಗೆ ವೈದ್ಯರು ಅಬುತಾಲಿಬ್ ರವರು ಮೃತಪಟ್ಟಿರುತ್ತಾರೆ ಎಂದು ತಿಳಿಸಿರುತ್ತಾರೆ. ಈ ವಿಷಯವನ್ನು ತಿಳಿದು, ಚಾಸಾ-1 ರವರು ಸ್ವಲ್ಪ ಕಾಲ ಮೂರ್ಛೆ ಹೋಗಿದ್ದರು. ಆ ಸಮಯಕ್ಕೆ ಪೊಲೀಸರು ಸಹ ಸ್ಥಳಕ್ಕೆ

ಬಂದಿದ್ದು, ಚಾಸಾ–1 ರವರಿಗೆ ಸಮಾಧಾನ ಮಾಡಿ, ಅವರಿಂದ ಘಟನೆಯ ಕಾರಣ ತಿಳಿದು, ಚಾಸಾ–1 ರವರು ಹೇಳಿದಂತೆ ಸುಮಾರು 2.45 ರ ಸಮಯಕ್ಕೆ ಆಸ್ಪತ್ರೆಯಲ್ಲಿ ನಾನು ದೂರು ಬರೆದಿರುತ್ತೇನೆ. ತಾನು ಬರೆದ ದೂರನ್ನು ನೋಡಿ ಸಾಕ್ಷಿಯು ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–10 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ–10(ಬಿ) ಎಂದು ಗುರುತಿಸಲಾಯಿತು.

4. ನಿಪಿ–11 ಮತ್ತು 12 ರಲ್ಲಿ ಅಬುತಾಲಿಬ್ ರವರ ಮೃತ ದೇಹವನ್ನು ನೋಡಿ ಗುರುತಿಸಿರುತ್ತಾರೆ. ಘಟನೆಯ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ದಿ.05–05–2021 ರಂದು ಹೊನ್ನಾವರ ಪೊಲೀಸರು ಮೃತ ಅಬುತಾಲಿಬ್ ರವರ ಜೀವಂತ ಇರುವಾಗ ತೆಗೆದ ಫೋಟೊವನ್ನು ಹಾಜರುಪಡಿಸಲು ಹೇಳಿದ್ದು, ಚಾಸಾ–1 ರವರಿಂದ ಅಬುತಾಲಿಬ್ ರವರ ಫೋಟೊವನ್ನು ಪಡೆದು, ಅದನ್ನು ಪೊಲೀಸರ ಮುಂದೆ ಹಾಜರುಪಡಿಸಿರುತ್ತೇನೆ. ಆ ಸಮಯದಲ್ಲಿ ಚಾಸಾ–5 ಮತ್ತು 8 ರವರೂ ಹಾಜರಿದ್ದು, ಪೊಲೀಸರು ಸದರಿ ಫೋಟೊವನ್ನು ಬಿಳಿ ಹಾಳೆಯಲ್ಲಿ ಅಂಟಿಸಿ, ಸಹಿಗಳನ್ನು ಪಡೆದಿರುತ್ತಾರೆ. ಹಾಗೂ ಜಪ್ತುಪಡಿಸಿಕೊಂಡ ಕಾಲಕ್ಕೆ ಪಂಚನಾಮೆ ಮಾಡಿ, ಫೋಟೊ ತೆಗೆದಿರುತ್ತಾರೆ. ಪಂಚನಾಮೆಯನ್ನು ಈಗಾಗಲೇ ನಿಪಿ–42 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–42(ಬಿ) ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿ ತೆಗೆದ ಫೋಟೊವನ್ನು ನಿಪಿ–43 ಎಂದು ಗುರುತಿಸಲಾಗಿರುತ್ತದೆ. ನಾನು ಪೊಲೀಸರ ಮುಂದೆ ಹಾಜರುಪಡಿಸಿದ ಫೋಟೊವನ್ನು ನಿಪಿ–44 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–44(ಬಿ) ಎಂದು ಗುರುತಿಸಲಾಯಿತು. ಅದರ ಲಕೋಟೆಯನ್ನು ನಿಪಿ–44/1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–44/1(ಬಿ) ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ ಎಂ.ಓ–2 ಚಾಕುವನ್ನು, ಎಂ.ಓ–7 ಬಡಿಗೆಯನ್ನು, ಆ ದಿನ ಆರೋಪಿ ಧರಿಸಿದ್ದ ಎಂ.ಓ–1 ಶರ್ಟ್, ಎಂ.ಓ–3 ಲುಂಗಿಯನ್ನು ಹಾಗೂ ಅಬುತಾಲಿಬ್ ರವರ ಎಂ.ಓ–5 ಕನ್ನಡಕ, ಎಂ.ಓ–6 ಚಪ್ಪಲಿ, ಎಂ.ಓ–8 ಲುಂಗಿ, ಎಂ.ಓ–9 ಶರ್ಟ್, ಎಂ.ಓ–10 ನಿಕ್ಕರ್ ಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ.

5. ಈ ಘಟನೆ ನಡೆದ ದಿನದಂದು ಚಾಸಾ–15 ಅಂಜುಂ ರವರು ಬಟ್ಟೆ ತೊಳೆಯಲು ಚಾಸಾ–14 ರವರ ಮನೆಗೆ ಹೋಗಿ, ಮನೆಯ ಕಂಪೌಂಡಿನಲ್ಲಿ ಬಟ್ಟೆ ತೊಳೆಯುತ್ತಿದ್ದಾಗ, ಪಕ್ಕದ

ಮನೆಯ ಆರೋಪಿಯು ಚಾಸಾ–15 ರವರಿಗೆ ತನ್ನ ಲುಂಗಿಯನ್ನು ಎತ್ತಿ ತೋರಿಸಿ, ಅಸಭ್ಯವಾಗಿ ವರ್ತಿಸಿರುತ್ತಾನೆ. ಈ ವಿಷಯವನ್ನು ಚಾಸಾ–15 ರವರು ತನ್ನ ಗಂಡ ಚಾಸಾ–10 ರವರಿಗೆ ತಿಳಿಸಿದ್ದು, ಆನಂತರ ಅವರಿಬ್ಬರು ಅಬುತಾಲಿಬ್ ರವರ ಮನೆಗೆ ಹೋಗಿ, ಆರೋಪಿ ಮಾಡಿದ ಕೃತ್ಯದ ಬಗ್ಗೆ ತಿಳಿಸಿದ್ದು, ಆನಂತರ ಅಬುತಾಲೀಬ ರವರು ಆರೋಪಿಯನ್ನು ಕೇಳಲು ಚಾಸಾ–14 ರವರ ಮನೆಯ ಮುಂದಿನ ರಸ್ತೆಗೆ ಬಂದಾಗ ಎದುರಿಗೆ ಆರೋಪಿಯು ಬಂದಿದ್ದು ಅಬುತಾಲಿಬ್ ರವರು ಆರೋಪಿಗೆ ಬುದ್ಧಿವಾದ ಹೇಳಿರುತ್ತಾರೆ ಹಾಗೂ ಈ ಹಿಂದೆಯೂ ಸಹ ಬಹಳಷ್ಟು ಬಾರಿ ಬುದ್ಧಿವಾದ ಹೇಳಿದ್ದರಿಂದ ಆರೋಪಿಯು ಅಬುತಾಲಿಬ್ ರವರ ಮೇಲೆ ಸಿಟ್ಟಿನಿಂದ ಇದ್ದು, ಕೊಲೆ ಮಾಡುವ ಉದ್ದೇಶದಿಂದ ತನ್ನ ಮನೆಯಿಂದ ಚಾಕುವನ್ನು ತಂದು ಅಬುತಾಲಿಬ್ ರವರ ಎದೆಗೆ ಚುಚ್ಚಿ ಕೊಲೆ ಮಾಡಿರುತ್ತಾನೆ.

**ಪಾಟೀ ಸವಾಲುಃ ಆರೋಪಿ ಪರ ಸಿ.ಎಲ್.ಎ.ಡಿ.ಸಿ. ರವರಿಂದಃ–**

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

*Sd/-*

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.